## ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.
## ಸಿ.ಸಿ ನಂಃ **824/2018**

| | | |
|---|---|---|
| ಸಾಕ್ಷಿಯ ಹೆಸರುಃ | ಶ್ರೀ ವಿ.ಕೆ ಗಾಣಗೇರ್ | ಫ್ರಾಸಾಃ 06 |
| ತಂದೆ ಹೆಸರುಃ | | ಚಾಸಾಃ 06 |
| ವಯಸ್ಸುಃ | 46 ವರ್ಷ | ದಿಃ 10-02-2026 |
| ಉದ್ಯೋಗಃ | ಅಬಕಾರಿ ಉಪ ಅದೀಕ್ಷಕರು, ಚಿಕ್ಕೋಡಿ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಚಿಕ್ಕೋಡಿ | |

<u>ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ</u>

ನಾನು ಏಪ್ರಿಲ್ 2018 ರಿಂದ ಸೆಪ್ಟೆಂಬರ್ 2018 ವವರೆಗೆ ಯಾದಗಿರಿ ಉಪ ಆಯಕ್ತರ ಕಚೇರಿಯಲ್ಲಿ ಅಬಕಾರಿ ನಿರೀಕ್ಷಕನಾಗಿ ಸೇವೆ ಸಲ್ಲಿಸಿದ್ದೇನೆ.

ದಿನಾಂಕಃ 09-04-2018 ರಂದು ನಾನು ಕಚೇರಿಯಲ್ಲಿದ್ದಾಗ ಮಃ 03.5 ಗಂಟೆಗೆ ಯಾದಗಿರಿ-ವಾಡಿ ರಸ್ತೆಯಲ್ಲಿ ಬೈಕಿನಲ್ಲಿ ಮದ್ಯ ಹಾಗೂ ಬಿಯಾರ್ ಸಾಗಾಟ ನಡೆದಿರುವ ಬಗ್ಗೆ ಮಾಹಿತಿ ಬಂದಿರುತ್ತದೆ. ನಂತರ ನಾನು ಹಾಗೂ ಚಾಸಡಾ 3 ರವರು ಯಾದಗಿರಿ ಜಿಲ್ಲಾಧಿಕಾರಿಗಳ ಕಚೇರಿ ಹತ್ತಿರ ಹೋಗಿ ಚಾಸಾಃ 1 ಮತ್ತು 2 ರವರನ್ನು ಪಂಚರನ್ನಾಗಿ ಕರೆದುಕೊಂಡು ಅಲಿಪುರ ರಸ್ತೆಯಲ್ಲಿ ರಸ್ತೆಗಾವಲು ಮಾಡುತ್ತಿದ್ದೆವು. ಆಗ ಒಂದು ದ್ವೀಚಕ್ರ ವಾಹನದ ಮೇಲೆ ಬಿಳಿ ಗೋಣಿ ಚೀಲ ಇಟ್ಟುಕೊಂಡು ಬರುವುದು ಕಂಡುಬಂದಿರುತ್ತದೆ. ನಾವು ಸದರಿ ವಾಹನವನ್ನು ನಿಲ್ಲಿಸಿ ಸ್ಥಳದಲ್ಲಿ ಶೋಧನಾ ಸಮುಚಿತ ಪತ್ರವನ್ನು ತಯಾರಿಸಿಕೊಂಡು ಪರಿಶೀಲನೆ ಮಾಡಲಾಗಿ ಮದ್ಯ ಹಾಗೂ ಬಿಯಾರ್ ಇರುವುದು ಕಂಡಬಂದಿರುತ್ತದೆ. ಬೈಕ್ ಚಾಲಕನಾಗಿದ್ದ ಆರೋಪಿ ಪರವಾನಿಗೆ ಇದೆಯೇ ಎಂದು ಕೇಳಿದಾಗ ಯಾವುದೇ ಉತ್ತರ ನೀಡಿರುವುದಿಲ್ಲ. ನಂತರ ಪರಿಶೀಲಿಸಿ ನೋಡಲಾಗಿ 90 ಮಿಲಿಯ ಒಸಿ ವಿಸ್ಕಿಯ 48 ಟೆಟ್ರಾ ಪಾಕೇಟುಗಳು, 330 ಮಿಲಿಯ 36 ಕೆ ಎಫ್ ಟಿನ್ ಗಳು ಹಾಗೂ 650 ಮಿಲಿಯ 12 ಕೆ ಎಫ್ ಬಾಟಲಿಗಳು ಇರುವುದು ಕಂಡುಬಂದಿರುತ್ತದೆ. ಅವುಗಳನ್ನು ವಶಕೆ ಪಡೆದು ಎರಡು ಟೆಟ್ರಾ ಪಾಕೆಟು, ಒಂದು ಟಿನ್ ಹಾಗೂ ಒಂದು ಬಾಟಲಿಯನ್ನು ಮಾದರಿಯಾಗಿ ತೆಗೆದುಕೊಂಡಿದ್ದೆವು. ಆರೋಪಿತನನ್ನು ವಿಚಾರಿಸಲಾಗಿ ತನ್ನ ಹೆಸರು ವೆಂಕಟೇಶ ತಂದೆ ಮರೆಪ್ಪ ಶ್ರೀಗಿರಿ, ಸಾಃ ರಾಜಾಪೂರ ಎಂದು ತಿಳಿಸಿದ್ದನು. ವಾಹನ ಪರಿಶೀಲಿಸಲಾಗಿ ಅದು ಕೆಎ-33 ಯು-9030 ನಂಬರಿನ ಹೊಂಡಾ ಶೈನ್ ಬೈಕ್

ಆಗಿರುವುದು ಕಂಡುಬಂದಿರುತ್ತದೆ. ಸ್ಥಳದಲ್ಲಿ ಸಾಃ 4.30 ರಿಂದ 5.30 ವರೆಗೆ ಪಂಚನಾಮೆ ಮಾಡಿರುತ್ತೇನೆ. ಅದನ್ನು ಪಂಚರಿಗೆ ಓದಿ ಹೇಳಿ ಅವರ ಸಹಿ ಪಡೆದುಕೊಂಡಿರುತ್ತೇನೆ. ನಂತರ ಆರೋಪಿ ಹಾಗೂ ಮು.ಮಾಲಿನೊಂದಿಗೆ ಕಚೇರಿಗೆ ಬಂದು ಸರಕಾರದ ಪರವಾಗಿ ದೂರು ದಾಖಲಿಸಿರುತ್ತೇನೆ.

ನಂತರ ದಿಃ 06.06.2018 ರಂದು ಚಾಸಾಃ 4 ರವರ ಮಾದರಿ ಮು.ಮಾಲನ್ನು ಮುಾಲಕ ರಾಸಾಯನಿಕ ಪರೀಕ್ಷೆಗೆ ಕಳುಹಿಸಿಕೊಟ್ಟಿರುತ್ತೇನೆ. ಅಲ್ಲದೇ ಚಾಸಾಃ 3 ರವರ ಹೇಳಿಕೆಯನ್ನು ಸಹ ಪಡೆದುಕೊಂಡಿದ್ದೆನು. ನಂತರ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾಃ 7 ರವರಿಗೆ ಒಪ್ಪಿಸಿದ್ದೆನು.

ಸಾಕ್ಷಿ ಆರೋಪಿಯನ್ನು ನೋಡಿ ಆತ ಮದ್ಯ ಸಾಗಾಟ ಮಾಡುತ್ತಿದ್ದ ವ್ಯಕ್ತಿ ಆಗಿರುತ್ತಾನೆ ಎಂದು ನುಡಿಯುತ್ತಾರೆ.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮು.ಮಾ 1 ರಿಂದ 4 ರಲ್ಲಿನ ಮದ್ಯದ ಪ್ಯಾಕೆಟು ಹಾಗೂ ಬಿಯಾರ್ ಕ್ಯಾನ್ ಮತ್ತು ಬಾಟಲಿಗಳನ್ನು ನೋಡಿ ಅವುಗಳು ಮಾದರಿ ಮದ್ಯದ ಪ್ಯಾಕೆಟು ಹಾಗೂ ಕ್ಯಾನ್ ಮತ್ತು ಬಾಟಲಿಗಳು ಆಗಿರುತ್ತವೆ ಎಂದು ನುಡಿದಿರುತ್ತಾರೆ.

ಶೋದನಾ ಪತ್ರ ನಿಪಿ-3 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-3(ಎ) ನಿಪಿ-1ರ ಪಂಚನಾಮೆಯಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-1(ಸಿ), ಮಾದರಿ ಮುದ್ರೆ ಚೀಟಿಯನ್ನು ನಿಪಿ-4 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-4 ಎ, ದೂರನ್ನು ನಿಪಿ-5 ಎಂದು ಸಾಕ್ಷಿಯ ಸಹಿ ನಿಪಿ-5(ಎ) ಹಾಗೂ ಪ್ರ.ವ.ವರದಿಯನ್ನು ನಿಪಿ-6 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಎಂ ಬಿ ಪಿ ವಕೀಲರಿಂದಃ</u>

ಈ ಪ್ರಕರಣ ಪತ್ತೆಯಾದಾಗ ವಿಧಾನಸಬೆ ಚುನಾವಣೆ ಘೋಷಣೆ ಆಗಿತ್ತು ಎಂದರೆ ಸರಿ. ಗುನ್ನೆಜಾಗದಲ್ಲಿ ಯಾವುದೇ ಸಾರ್ವಜನಿಕರು ಇರಲಿಲ್ಲ. ಪಂಚನಾಮೆಯನ್ನು ನಾನೇ ಬರೆದಿರುತ್ತೇನೆ.

ನಾವು ಯಾವುದೇ ಸ್ಥಳಕ್ಕೆ ಹೋಗಿಲ್ಲ, ಸ್ಥಳದಲ್ಲಿ ಯಾವುದೇ ಪಂಚನಾಮೆ ಮಾಡಿಲ್ಲ ಹಾಗೂ ಯಾವುದೇ ವಸ್ತು ಜಪ್ತಿ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ

ಮತ್ತು ಮು.ಮಾಲಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಯಾವುದೇ ಘಟನೆ ಆಗದಿದ್ದರೂ ಇಲಾಖಾ ಅಂಕಿ-ಅಂಶಗಳಿಗೋಸ್ಕರ ಸುಳ್ಳು ಪ್ರಕರಣ ದಾಖಲು ಮಾಡಿಕೊಂಡಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಃ ಇರುವುದಿಲ್ಲ.

( ಸಾಕ್ಷಿ ವಿ.ಸಿ ಯಲ್ಲಿ ನೀಡಿದ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ